ಕಿರಿಯ ಕಲಾವಿದರಿಗೆ ಮಾರ್ಗದರ್ಶನ ಮಾಡುವ ಕಮ್ಮಟಗಳನ್ನು ಮಾಡಬೇಕು. ಹಾಗೆ ನೋಡಿದರೆ ಇಲ್ಲಿಯೂ ಕನ್ನಡದ ಓದು ಬಹಳ ಮುಖ್ಯವಾಗಿದೆ. ಕನ್ನಡ ಬಯಲಾಟಗಳು ಮತ್ತು ಕನ್ನಡ ಪ್ರಾಥಮಿಕ ಶಾಲೆಗಳು ಉಳಿದರೆ ಮಾತ್ರದ ಈ ಕಲಾಪ್ರಕಾರವು ಶ್ರೀಮಂತವಾಗಿ ಮುಂದುವರೆಯುತ್ತದೆ. ಪುರಂದರ ದಾಸರು, ಪಾರ್ತಿಸುಬ್ಬನಿಂದ ಹಿಡಿದು ಈಗಿನ ಹೊಸ ಹೊಸ ಭಾಗವತರವರೆಗೆ ಎಷ್ಟೋ ಪ್ರಸಂಗಗಳು ಛಂದೋಬದ್ಧವಾಗಿ ರಚನೆಯಾಗಿವೆ. ಪ್ರಕಟಿತ ಪ್ರಸಂಗಗಳು, ಅಪ್ರಕಟಿತವಾಗಿರುವ ಪ್ರಸಂಗಗಳು, ಲುಪ್ತವಾಗಿರುವ ಅನೇಕ ಪ್ರಸಂಗಗಳನ್ನು ಪರಿಗಣಿಸಿದರೆ ಸುಮಾರು ಆರು ಸಾವಿರ ಪ್ರಸಂಗಗಳು ಇರಬಹುದು. ಒಂದು ಬಯಲಾಟ ಪ್ರಸಂಗವನ್ನು ಪೂರ್ಣಗೊಳ್ಳುವ ವೇಳೆಗೆ ಸುಮಾರು 200 ಪದ್ಯಗಳನ್ನು ಬಳಸುವುದು ವಾಡಿಕೆ. ಹಾಗಿದ್ದರೆ ಎರಡು ಲಕ್ಷಕ್ಕೂ ಅಧಿಕ ಪದ್ಯ ಸಾಹಿತ್ಯ ಈ ಕ್ಷೇತ್ರದಲ್ಲಿದೆ. ಇದನ್ನೇ ನಾನು ಕನ್ನಡ ಗೀತೆ ಸಂಪದ ಎಂದು ಹೇಳುವುದು. ನಮ್ಮ ಈ ಕಲಾ ಸಂಪತ್ತು ಮತ್ತು ಸಾಹಿತ್ಯ ಸಿರಿಯನ್ನು ಉದಯೋನ್ಮುಖರಿಗೆ ಪರಿಚಯ ಮಾಡಿಕೊಡುವ ವ್ಯವಸ್ಥೆಯೊಂದನ್ನು ನಾವೇ ರೂಪಿಸಬೇಕಲ್ಲವೇ? ನೇರವಾಗಿ ಮಾತುಗಾರಿಕೆ ಕಲಿಯುವುದು ಸುಲಭದ ಮಾತಲ್ಲ. ನಮ್ಮ ಪರಂಪರೆಯ ಮಹತ್ವವನ್ನು ಅರಿತಿರುವುದು ಒಳ್ಳೆಯದು ಎನಿಸುತ್ತದೆ. ಮಾತುಗಾರಿಕೆ ಎಂದು ಭಾಗವತರು ಹೇಳಿದ ಪದ್ಯಕ್ಕೆ ಅರ್ಥ ಹೇಳುವುದಲ್ಲ. ಬದಲಾಗಿದೆ ಸ್ವತಂತ್ರವಾಕ್ಯಗಳಲ್ಲಿ ಕಥೆಯನ್ನು ಸಾರ, ತಿರುಳನ್ನು ಕಟ್ಟಿಕೊಡುವುದು. ಅಂದರೆ ಇಲ್ಲಿ ಆಶುಕವಿತ್ವ, ಆಶುಭಾಷಣ ಕಲೆ ಬಹಳ ಮುಖ್ಯವಾದುದು.

**◆ ಯಕ್ಷಗಾನ ಮತ್ತು ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ಅನೇಕ ಕೃತಿಗಳನ್ನು ನೀವು ಬರೆದಿದ್ದೀರಿ. ನಿಮ್ಮ ಬರವಣಿಗೆಯ ಅನುಭವಗಳನ್ನು ಹಂಚಿಕೊಳ್ಳುವಿರಾ ?**

ಪ್ರೊ.ಸುರೇಂದ್ರನಾಥ್ ದಾಸ್‌ಗುಪ್ತಾ ಅವರು ಭಾರತದ ಮಹತ್ವದ ತತ್ವಶಾಸ್ತ್ರಜ್ಞ. ಅವರು ಭಾರತದಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಡಾಕ್ಟರೇಟ್ ಓದಿದರು. ನಂತರ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಯುರೋಪಿಯನ್ ಫಿಲಾಸಫಿಯನ್ನು ಅಧ್ಯಯನ ಮಾಡಿ 'ಸಮಕಾಲೀನ ಯುರೋಪಿಯನ್ ಫಿಲಾಸಫಿ'ಯ ಕುರಿತು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದರು. 1932ರಲ್ಲಿ ಇಂಡಿಯನ್ ಫಿಲಸಾಫಿಕಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಅಂತರರಾಷ್ಟ್ರೀಯ ತತ್ತ್ವಶಾಸ್ತ್ರ ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿ ಅಪಾರ ಜ್ಞಾನ ಸಂಪಾದಿಸಿದವರು. ಅವರು 'ದ ಹಿಸ್ಟರಿ ಆಫ್ ಇಂಡಿಯನ್ ಫಿಲಸಫಿ' ಎಂಬ ಐದು ಸಂಪುಟಗಳನ್ನು ಬರೆದಿದ್ದಾರೆ. 4000 ಪುಟಗಳ ಈ ಬೃಹತ್ ಕೃತಿಸಂಪುಟಗಳನ್ನು ಕನ್ನಡಕ್ಕೆ ಅನುವಾದಿಸುವ ತಂಡದ ನೇತೃತ್ವವನ್ನು ಕುವೆಂಪು ಭಾಷಾಭಾರತಿಯ ಆಗಿನ ಅಧ್ಯಕ್ಷರಾದ ಅಜಕ್ಕಳ ಗಿರೀಶ್ ಭಟ್ ಅವರೊಂದಿಗೆ ವಹಿಸುವ ಅವಕಾಶವು ನನಗೆ ಲಭಿಸಿತು. ನಿಜಕ್ಕೂ ಅದೊಂದು ಸಂತೋಷದ ಕಾರ್ಯ. ಭಾರತದ ದಾರ್ಶನಿಕ ಪರಂಪರೆಯನ್ನು ವೇದಕಾಲದಿಂದ ಆರಂಭಿಸಿ ನಂತರದ ಕಾಲಮಾನದಲ್ಲಿ ಟಿಸಿಲೊಡೆದು ವಿಸ್ತಾರಗೊಂಡ ತತ್ತ್ವಶಾಸ್ತ್ರ ಶಾಖೆಗಳ

